ಕರ್ನಾಟಕ ಸರ್ಕಾರ

# ಆಯುಕ್ತಾಲಯ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು,

**ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಂಗಳೂರು –560023.**

ದೂರವಾಣಿ ಸಂ:080–29603636 ಇ–ಮೇಲ್: spmbeckar@gmail.com

ಸಂ: ಡಿ.ಹೆಚ್.ಎಸ್/ಬಿ.ಇ.ಸಿ/52/2021–22 ದಿನಾಂಕ:05.03.2022

## ಅಧಿಕೃತ ಜ್ಞಾಪನ ಪತ್ರ

**ವಿಷಯ:** ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ಸರ್ಕಾರಿ ಕೋಟಾದಡಿಯಲ್ಲಿ ನವಂಬರ್–2021ರಲ್ಲಿ ಎಂಬಿಬಿಎಸ್ ವ್ಯಾಸಂಗ ಪೂರ್ಣಗೊಳಿಸಿದ (Supplementary batch) ಅಭ್ಯರ್ಥಿಗಳನ್ನು ಸರ್ಕಾರಿ ಆಸ್ಪತ್ರೆಗಳಲ್ಲಿ ಒಂದು ವರ್ಷ ಕಡ್ಡಾಯ ಸರ್ಕಾರಿ ಸೇವೆಗೆ ನಿಯುಕ್ತಿ ಮಾಡುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಕಾಯ್ದೆ ಮತ್ತು ನಿಯಮ ಸಂಖ್ಯೆ:ಇಡಿ/10/ಟಿಇಸಿ/2006 ದಿನಾಂಕ:28.02.2006
2. ಕಛೇರಿಯ ಸಮ ಸಂಖ್ಯೆ ಅಧಿಸೂಚನೆ ಪತ್ರ ದಿನಾಂಕ:25.02.2022
3. ಸರ್ಕಾರದ ಆದೇಶ ಸಂಖ್ಯೆ:ಆಕುಕ/ಹೆಚ್ಎಸ್ಹೆಚ್/2020 ದಿನಾಂಕ:06.05.2021

*******

ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ಸರ್ಕಾರಿ ಕೋಟಾದಡಿ ಆಯ್ಕೆಹೊಂದಿ ಎಂ.ಬಿ.ಬಿ.ಎಸ್ ವ್ಯಾಸಂಗ ಪೂರ್ಣಗೊಳಿಸಿದ ಅಭ್ಯರ್ಥಿಗಳು ಸರ್ಕಾರದ ಕಾಯ್ದೆ ಮತ್ತು ನಿಯಮಗಳನ್ವಯ ಒಂದು ವರ್ಷ ಕಡ್ಡಾಯ ವೈದ್ಯಕೀಯ ಸೇವೆ ನಿರ್ವಹಿಸಲು 2015ನೇ ಸಾಲಿನಲ್ಲಿ ದಾಖಲಾತಿ ಹೊಂದಿದ ವೈದ್ಯಕೀಯ ವಿದ್ಯಾರ್ಥಿಗಳು ನವಂಬರ್–2021 ರಲ್ಲಿ (Supplementary batch) ವ್ಯಾಸಂಗವನ್ನು ಪೂರ್ಣಗೊಳಿಸಿದ ಹಾಗೂ ತಡವಾಗಿ Internship ಪೂರೈಸಿದ ವೈದ್ಯರಿಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ಒಂದು ವರ್ಷ ಕಡ್ಡಾಯ ಸರ್ಕಾರಿ ಸೇವೆ ಸಲ್ಲಿಸಲು ಮೇಲ್ಕಂಡ ಉಲ್ಲೇಖಗಳಂತೆ ದಿನಾಂಕ:25.02.2022 ರಿಂದ ಆನ್‌ಲೈನ್‌ನಲ್ಲಿ ಕೌನ್ಸಿಲಿಂಗ್‌ಗೆ ಅವಕಾಶ ಕಲ್ಪಿಸಲಾಗಿದ್ದು, ಅಭ್ಯರ್ಥಿಗಳು ಅನುಕೂಲವಾಗುವ ಹುದ್ದೆಯನ್ನು ಆಯ್ಕೆ ಮಾಡಿಕೊಂಡಿರುತ್ತಾರೆ.

ಅದರಂತೆ ಅಭ್ಯರ್ಥಿಗಳು ಆಯ್ಕೆ ಮಾಡಿಕೊಂಡಿರುವ ಸ್ಥಳಕ್ಕೆ ಒಂದು ವರ್ಷದ ಅವಧಿಯ ಕಡ್ಡಾಯ ಸೇವೆಗೆ ನೇಮಿಸಿ ನಿಯುಕ್ತಿಗೊಳಿಸಿರುವ ಪಟ್ಟಿಯನ್ನು ಈ ಪತ್ರದೊಂದಿಗೆ ಅನುಬಂಧದಲ್ಲಿ ಲಗತ್ತಿಸಿದೆ.

**ಅ) ನಿಯುಕ್ತಿಗೊಂಡಿರುವ ವೈದ್ಯರುಗಳಿಗೆ ಈ ಕೆಳಕಂಡ ಷರತ್ತುಗಳು ಒಳಪಟ್ಟಿರುತ್ತದೆ.**

1. ಈ ಸ್ಥಳ ನಿಯುಕ್ತಿಯನ್ನು ಮೇಲೆ ಉಲ್ಲೇಖಿಸಿದಂತೆ ಕೇವಲ ಒಂದು ವರ್ಷದ ಅವಧಿಗೆ ಮಾತ್ರ ಮಾಡಲಾಗಿದ್ದು, ಯಾವುದೇ ಕಾರಣಕ್ಕೂ ಇದನ್ನೇ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನುಸಾರ ಮಾಡಲಾದ ಖಾಯಂ ನೇಮಕಾತಿಯೆಂದು ಭಾವಿಸತಕ್ಕದ್ದಲ್ಲ. ಮುಂದುವರೆದು, ಈ ನೇಮಕಾತಿಯು ಯಾವುದೇ ರೂಪದಲ್ಲಿಯೂ ಸಂಬಂಧಿಸಿದ ಅಭ್ಯರ್ಥಿಗೆ ಇಲಾಖೆಯಲ್ಲಿ ಖಾಯಂ ಆಗಿ ನೇಮಕಗೊಳ್ಳುವಂತಹ ಹಕ್ಕನ್ನು ಸ್ಥಾಪಿಸಲು ಅವಕಾಶವಿರುವುದಿಲ್ಲ.
2. ನಿಯುಕ್ತಿಗೊಂಡಿರುವ ಅವಧಿಯು, ಈ ಆದೇಶದನ್ವಯ ಕರ್ತವ್ಯಕ್ಕೆ ವರದಿ ಮಾಡಿಕೊಂಡ ದಿನಾಂಕದಿಂದ ಒಂದು ವರ್ಷದ ಅವಧಿಗೆ ಮಾತ್ರ ಇರುತ್ತದೆ.
3. ಒಂದು ವರ್ಷದ ನಿಯುಕ್ತಿಯ ಅವಧಿಯಲ್ಲಿ, ವೈದ್ಯರು ಗೈರು ಹಾಜರಾದಲ್ಲಿ ಅಥವಾ ಯಾವುದೇ ಅವಧಿಗೆ ವೇತನ ರಹಿತ ರಜೆಯನ್ನು ಪಡೆದುಕೊಂಡಲ್ಲಿ ಆ ಪ್ರಮಾಣದ ಅವಧಿಗೆ ಸದರಿಯವರ ನಿಯುಕ್ತಿ ಅವಧಿಯು ಸ್ವಯಂಚಾಲಿತವಾಗಿ ಮುಂದುವರಿಯಲ್ಪಡುತ್ತದೆ
4. ಒಂದು ವರ್ಷದ ಕಡ್ಡಾಯ ಸರ್ಕಾರಿ ಸೇವೆಗೆ ಒಳಪಟ್ಟ ಪ್ರತಿಯೊಬ್ಬ ಅಭ್ಯರ್ಥಿಗೆ ಅವರು ಆಯ್ಕೆ ಮಾಡಿಕೊಂಡಿರುವ ಸ್ಥಳದನ್ವಯ ಈ ಕೆಳಕಂಡಂತೆ ಆಯಾ ಸಂಬಂಧಪಟ್ಟ ಸಂಸ್ಥೆಯವರು ವೇತನವನ್ನು ಪಾವತಿಸುವರು.

   a) ವೈದ್ಯಕೀಯ ಶಿಕ್ಷಣ ಇಲಾಖೆಯ ನಿರ್ದೇಶಕರ ಅಡಿಯಲ್ಲಿ ಬರುವ ವೈದ್ಯಕೀಯ ಕಾಲೇಜುಗಳಲ್ಲಿ ವೇತನ ಪಾವತಿಸುವ ಮಾರ್ಗಸೂಚಿಗಳನ್ವಯ ಮಾಸಿಕ ಸಂಭಾವನೆ ನೀಡುವುದು.

b) ಆರೋಗ್ಯ ಇಲಾಖೆಯ ಆಸ್ಪತ್ರೆಗಳಲ್ಲಿ ನಿಯೋಜಿಸಿರುವ ಎಂಬಿಬಿಎಸ್ ವೈದ್ಯರುಗಳಿಗೆ ನಿಯೋಜನೆಗೊಂಡಿರುವ ಹುದ್ದೆಗಳಿಗನುಗುಣವಾಗಿ ರಾಷ್ಟ್ರೀಯ ಆರೋಗ್ಯ ಅಭಿಯಾನದ ಕಾರ್ಯಕ್ರಮದಡಿ ಆಯ್ಕೆ ಮಾಡಿಕೊಂಡ ಅಭ್ಯರ್ಥಿಗಳಿಗೆ ರಾಷ್ಟ್ರೀಯ ಆರೋಗ್ಯ ಅಭಿಯಾನ ಮಾರ್ಗಸೂಚಿಯಂತೆ, ART ಅಡಿಯಲ್ಲಿ ಆಯ್ಕೆ ಮಾಡಿಕೊಂಡ ಅಭ್ಯರ್ಥಿಗಳಿಗೆ KSAPS ಮಾರ್ಗಸೂಚಿಯಂತೆ ಹಾಗೂ ಪ್ರಾಥಮಿಕ/ಸಮುದಾಯ ಆರೋಗ್ಯ ಕೇಂದ್ರದ ಹುದ್ದೆಗಳಿಗೆ ಆಯ್ಕೆ ಮಾಡಿಕೊಂಡ ಅಭ್ಯರ್ಥಿಗಳಿಗೆ ಉಲ್ಲೇಖ(3)ರ ಆದೇಶದಂತೆ ರಾಜ್ಯ ಅನುದಾನದಿಂದ ವೇತನವನ್ನು ಭರಿಸುವುದು. ಒಂದು ವರ್ಷ ಕಡ್ಡಾಯ ಸೇವೆ ನಿರ್ವಹಿಸುವ ವೈದ್ಯರ ಗೌರವಧನ ಪಾವತಿಗಾಗಿ ಅನುದಾನ ಬೇಡಿಕೆಗೆ ಬಿಡುಗಡೆಯ ಬಗ್ಗೆ ನೇರವಾಗಿ ಮುಖ್ಯ ಲೆಕ್ಕಾಧಿಕಾರಿಗಳು ಹಾಗೂ ಆರ್ಥಿಕ ಸಲಹೆಗಾರರು, ಆರೋಗ್ಯ ಮತ್ತು ಕು.ಕ.ಸೇವೆಗಳು ಇವರಿಗೆ ಪ್ರಸ್ತಾವನೆ ಸಲ್ಲಿಸುವುದು.

5. ಸರ್ಕಾರದ ಕರ್ತವ್ಯವನ್ನು ನಿರ್ವಹಿಸಲು ಪ್ರಯಾಣಿಸಿದಾಗ, ಕೆ.ಸಿ.ಎಸ್.ಆರ್ ನಿಯಮಗಳನುಸಾರ ಪ್ರಯಾಣ ಭತ್ಯೆಗೆ ಅರ್ಹರಾಗುವರು. ಆದಾಗ್ಯೂ, ಈ ಆದೇಶಾನುಸಾರ ಪ್ರಥಮ ಬಾರಿಗೆ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ಸ್ವ-ಸ್ಥಳದಿಂದ ಮಾಡುವ ಪ್ರಯಾಣಕ್ಕೆ ಯಾವುದೇ ಪ್ರಯಾಣ ಭತ್ಯೆಗೆ ಅರ್ಹರಾಗುವುದಿಲ್ಲ.
6. ಸದರಿ ವೈದ್ಯರು, ತಮಗೆ ಸ್ಥಳ ನಿಯುಕ್ತಿಗೊಳಿಸಲಾದ ಸರ್ಕಾರಿ ಆಸ್ಪತ್ರೆಗಳಲ್ಲಿ ಅಧಿಕೃತ ಕೆಲಸದ ಸಮಯದಲ್ಲಿ ಆಡಳಿತ ವೈದ್ಯಾಧಿಕಾರಿಗಳ ಸಲಹೆ: ಮಾರ್ಗದರ್ಶನದ ಮೇರೆಗೆ ಕರ್ತವ್ಯ ನಿರ್ವಹಿಸತಕ್ಕದ್ದು. ಸದರಿ ವೈದ್ಯರು ಯಾವುದೇ ಮೆಡಿಕೋ-ಲೀಗಲ್ (Medico Legal) ಪ್ರಕರಣಗಳನ್ನು ನಿರ್ವಹಿಸತಕ್ಕದ್ದಲ್ಲ. ಮಿಕ್ಕಂತೆ, ತಮಗೆ ನೇಮಿಸಲಾದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ವೈದ್ಯಕೀಯ ಪ್ರಕರಣಗಳ ಜವಾಬ್ದಾರಿಯನ್ನು ನಿರ್ವಹಿಸತಕ್ಕದ್ದು.
7. ನಿಯುಕ್ತಿ ಅವಧಿಯಲ್ಲಿ, ಸದರಿ ವೈದ್ಯರು ಪ್ರತಿ ಒಂದು ತಿಂಗಳ ಅವಧಿಯ ಸೇವೆಗೆ ಒಂದು ದಿನದ ಸಾಂದರ್ಭಿಕ ರಜೆ ಹಾಗೂ ಒಂದು ವರ್ಷದ ಅವಧಿಗೆ 10 ದಿನಗಳ ವೈದ್ಯಕೀಯ ರಜೆಯನ್ನು ಪಡೆಯಲು ಅರ್ಹರಿರುತ್ತಾರೆ.
8. ನಿಯುಕ್ತಿ ಅವಧಿಯಲ್ಲಿ ಸದರಿ ವೈದ್ಯರು ಕರ್ನಾಟಕ ಸಿವಿಲ್ ಸೇವೆ (ನಡತೆ) ನಿಯಮಗಳ 1966 ರ ನಿಯಮ 3 ರ ಈ ಕೆಳಕಂಡ ಅವಕಾಶಗಳಿಗೆ ಬದ್ಧರಾಗಿರತಕ್ಕದ್ದು.

**ಅಂದರೆ, ಒಂದು ವರ್ಷ ಕಡ್ಡಾಯ ಸರ್ಕಾರಿ ಸೇವೆಯ ವೈದ್ಯರು ಎಲ್ಲಾ ಕಾಲದಲ್ಲೂ**

(1) ಸಂಪೂರ್ಣ ಸಮಗ್ರತೆ (Absolute integrity) ಯನ್ನು ಕಾಪಾಡಿಕೊಳ್ಳತಕ್ಕದ್ದು.

(2) ಕರ್ತವ್ಯ ಶ್ರದ್ಧೆಯನ್ನು ಹೊಂದಿರತಕ್ಕದ್ದು.

(3) ಸರ್ಕಾರಿ ನೌಕರನಿಗೆ ತಕ್ಕುದಲ್ಲದಂತೆ ವರ್ತಿಸಬಾರದು.

ತಪ್ಪಿದಲ್ಲಿ, ಈ ಆದೇಶ ಹೊರಡಿಸಿರುವ ಪ್ರಾಧಿಕಾರಿಯು, ಸೂಕ್ತ ವಿಚಾರಣೆಯ ನಂತರ ಸಂದರ್ಭಾನುಸಾರ, ನಿಯುಕ್ತಿ ಅವಧಿಯನ್ನು ಮೊಟಕುಗೊಳಿಸಿ ಕರ್ತವ್ಯದಿಂದ ಬಿಡುಗಡೆ ಮಾಡುವ ದಂಡನೆಯೂ ಒಳಗೊಂಡಂತೆ, ಸಮುಚಿತ ದಂಡನೆ ವಿಧಿಸಬಹುದಾಗಿದ್ದು, ಈ ಸಂಬಂಧದಲ್ಲಿ ಅಗತ್ಯ ಕ್ರಮ ಕೈಗೊಳ್ಳಬಹುದಾಗಿದೆ. ಈ ರೀತಿ ವಿಧಿಸಲಾದ ಯಾವುದೇ ದಂಡನೆಯು, ಭವಿಷ್ಯದಲ್ಲಿ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಾನುಸಾರ ನೇಮಕಾತಿ ಮಾಡುವ ಸಂದರ್ಭದಲ್ಲಿ, ಸಂಬಂಧಿಸಿದ ಅಭ್ಯರ್ಥಿಯ ಸೂಕ್ತತೆ/ ಅರ್ಹತೆಯನ್ನು ನಿರ್ಧರಿಸುವಾಗ, ಪ್ರತಿಕೂಲ ಪರಿಣಾಮ ಬೀರಬಹುದಾಗಿರುತ್ತದೆ ಮತ್ತು ಅವರ ವೃತ್ತಿಪರ ಭವಿಷ್ಯಕ್ಕೆ ಮಾರಕವಾಗುವ ಸಾಧ್ಯಗಳಿರುತ್ತವೆಂದು ತಿಳಿಯತಕ್ಕದ್ದು.

ಈ ಆದೇಶಾನುಸಾರ, ಸಂಬಂಧಿಸಿದ ಅಭ್ಯರ್ಥಿಗಳು ಆದೇಶ ಹೊರಡಿಸಿದ ದಿನಾಂಕದಿಂದ 07 ದಿನಗಳೊಳಗಾಗಿ, ಸಂಬಂಧಿಸಿದ ವೈದ್ಯಕೀಯ ಕಾಲೇಜುಗಳ ಡೀನ್ ಮತ್ತು ನಿರ್ದೇಶಕರು, ಜಿಲ್ಲಾ ಆಸ್ಪತ್ರೆಯ ಜಿಲ್ಲಾ ಶಸ್ತ್ರಚಿಕಿತ್ಸಕರು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಪರಿಶೀಲಿಸಿ, ಕರ್ತವ್ಯಕ್ಕೆ ಹಾಜರು ಪಡಿಸಿಕೊಳ್ಳುವುದು ಹಾಗೂ ಒಂದು ವೇಳೆ ಸದರಿ ನಿಯೋಜಿಸಿದ ಸ್ಥಳದಲ್ಲಿ ಗುತ್ತಿಗೆ ವೈದ್ಯರು ಕಾರ್ಯನಿರ್ವಹಿಸುತ್ತಿದ್ದಲ್ಲಿ ಅವರನ್ನು ಕರ್ತವ್ಯದಿಂದ ಬಿಡುಗಡೆ ಮಾಡಿ ಕಡ್ಡಾಯ ಸರ್ಕಾರಿ ಸೇವೆಗೆ ಹಾಜರಾಗಿರುವ ವೈದ್ಯರನ್ನು ಕರ್ತವ್ಯಕ್ಕೆ ವರದಿ ಮಾಡಿಸಿಕೊಂಡು ನೇಮಿಸಲಾದ ಸರ್ಕಾರಿ ಆರೋಗ್ಯ ಸಂಸ್ಥೆಯಲ್ಲಿ ಕರ್ತವ್ಯನಿರ್ವಹಿಸಲು ಚಲನಾದೇಶ ನೀಡುವುದು.

ಒಂದು ವರ್ಷ ಕಡ್ಡಾಯ ಸರ್ಕಾರಿ ಸೇವೆಗೆ ನಿಯುಕ್ತಿಗೊಳಿಸಿರುವ ವೈದ್ಯರುಗಳಿಗೆ ಕಡ್ಡಾಯವಾಗಿ ಆಧಾರ್ ಆಧರಿತ ಬಯೋಮೆಟ್ರಿಕ್ ಹಾಜರಾತಿಯನ್ನು ಕರ್ತವ್ಯಕ್ಕೆ ವರದಿ ಮಾಡಿಕೊಂಡ ದಿನಾಂಕದಿಂದ ನೊಂದಣಿ ಮಾಡಿಕೊಳ್ಳುವುದು ಹಾಗೂ ಪ್ರತಿ ಮಾಹೆ ಆಧಾರ್ ಆಧರಿತ ಬಯೋಮೆಟ್ರಿಕ್ ಹಾಜರಾತಿಯಲ್ಲಿ ದಾಖಲಾಗಿರುವ ಬಗ್ಗೆ (ಒಳ ಮತ್ತು ಹೊರ) ಖಚಿತ ಪಡಿಸಿಕೊಂಡು ವೇತನ ಸೆಳೆದು ವಿತರಿಸುವುದು. ತಪ್ಪಿದ್ದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ನೇರ ಹೊಣೆಗಾರರಾಗಿರುತ್ತಾರೆ.